# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1578(1854) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಇತ್ತೀಚೆಗೆ ವರದಿಯಾಗುತ್ತಿರುವ ವಿವಿಧ ಸಮಸ್ಯೆಗಳನ್ನು ಸರ್ಕಾರ ಗಮನಿಸಿದೆಯೇ; ಗಮನಿಸಿದ್ದರೆ ಅವುಗಳ ಸಂಪೂರ್ಣ ವಿವರವೇನು ಮತ್ತು ಅವುಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಇತ್ತೀಚೆಗೆ ಯಾವುದೇ ಸಮಸ್ಯೆಗಳು ವರದಿಯಾಗಿರುವುದಿಲ್ಲ. |
| ಆ) | ನಲಿಕಲಿ ಕಾರ್ಯಕ್ರಮವನ್ನು ರದ್ದುಪಡಿಸಲು ಕಾರಣಗಳು ಯಾವುವು; ಇದರಿಂದ ವಿದ್ಯಾರ್ಥಿಗಳ ಮೇಲೆ ಉಂಟಾಗಬಹುದಾದ ಪರಿಣಾಮವನ್ನು ಸರ್ಕಾರ ಮೌಲ್ಯಮಾಪನ ಮಾಡಿದೆಯೇ? | 1. ಪ್ರಸ್ತುತ ರಾಜ್ಯದಲ್ಲಿ 46675 ಸರ್ಕಾರಿ ಶಾಲೆಗಳಿದ್ದು ಇವುಗಳಲ್ಲಿ 41776 ಶಾಲೆಗಳು ಸರ್ಕಾರಿ ಪ್ರಾಥಮಿಕ ಶಾಲೆಗಳಾಗಿರುತ್ತದೆ. ಈ ಪೈಕಿ 19567 ಶಾಲೆಗಳು ಕಿರಿಯ ಪ್ರಾಥಮಿಕ, 21430 ಹಿರಿಯ ಪ್ರಾಥಮಿಕ ಶಾಲೆಗಳಿರುತ್ತವೆ. ಈ ಶಾಲೆಗಳಲ್ಲಿ ಒಟ್ಟಾರೆಯಾಗಿ 28,96,827 ವಿದ್ಯಾರ್ಥಿಗಳು ದಾಖಲಾಗಿದ್ದು ಒಟ್ಟು 1,06,325 ಪ್ರಾಥಮಿಕ ಶಾಲಾ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.<br>2. ಮೊದಲನೆಯದಾಗಿ, ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಪರಿಶೀಲಿಸಿದಾಗ, 2024 ರಲ್ಲಿ NCERTಯು ನಡೆಸಿದ PARAKH (Performance Assessment, Review and Analysis of Knowledge for Holistic development) RASHTRIYA SARVEKSHAN ದಲ್ಲಿ ಶೇ.50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ನಿಗದಿಪಡಿಸಿದ ಸಾಮರ್ಥ್ಯಗಳನ್ನು ಗಳಿಸಿರುವುದು ಕಂಡುಬಂದಿರುತ್ತದೆ. ಭಾಷಾ ಕಲಿಕೆಯಲ್ಲಿ ರಾಜ್ಯದ 3ನೇ ತರಗತಿಗಳ ವಿದ್ಯಾರ್ಥಿಗಳು 60% ಸಾಧನೆಯನ್ನು ಮಾಡಿದ್ದು ರಾಷ್ಟ್ರಮಟ್ಟಕ್ಕಿಂತ 4% ಕಡಿಮೆ ಸಾಧನೆಯನ್ನು ಮಾಡಿರುತ್ತಾರೆ. ಗಣಿತ ವಿಷಯದಲ್ಲಿ ರಾಷ್ಟ್ರಮಟ್ಟಕ್ಕಿಂತ 3% ರಷ್ಟು ಕಡಿಮೆ ಸಾಧನೆಯನ್ನು ರಾಜ್ಯದ ವಿದ್ಯಾರ್ಥಿಗಳು ಮಾಡಿರುತ್ತಾರೆ. 6ನೇ ತರಗತಿಯ ವಿದ್ಯಾರ್ಥಿಗಳು ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ರಾಷ್ಟ್ರಮಟ್ಟಕ್ಕಿಂತ ಕ್ರಮವಾಗಿ 2%, 1% ಮತ್ತು 1% ಕಡಿಮೆ ಸಾಧನೆ ತೋರಿಸಿರುತ್ತಾರೆ. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವು ಹಿರಿಯ ಪ್ರಾಥಮಿಕ ಶಾಲೆಗಳಿಗಿಂತ ಕಡಿಮೆ ಇರುವುದು ಕಂಡುಬರುತ್ತದೆ. |

3. 2024ರ ASER (Annual Status of Education Report) ವರದಿಯಲ್ಲಿ ಕರ್ನಾಟಕದ 1ನೇ ತರಗತಿ (89%) ಮತ್ತು 2ನೇ ತರಗತಿಯಲ್ಲಿ (87.7%) ವಿದ್ಯಾರ್ಥಿಗಳು ಬಹುವರ್ಗ ಬೋಧನೆಗೆ ಒಳಪಟ್ಟಿದ್ದು, ವಿವಿದ ತರಗತಿಗಳ ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುವುದರಿಂದ ಕಲಿಕಾ ಮಟ್ಟದಲ್ಲಿ ಕುಸಿತವನ್ನು ಕಾಣಬಹುದಾಗಿದೆ. ಎಂದು ಅಭಿಪ್ರಾಯಿಸಲಾಗಿದೆ. ಮುಂದುವರೆದು ಸರ್ಕಾರಿ ಶಾಲೆಗಳ 3ನೇ ತರಗತಿಯ 15% ವಿದ್ಯಾರ್ಥಿಗಳು ಮಾತ್ರ 2ನೇ ತರಗತಿ ಮಟ್ಟದ ಪಠ್ಯವನ್ನು ಓದಲು ಶಕ್ತರಾಗಿರುತ್ತಾರೆ. 66% ರಷ್ಟು 3 ಮತ್ತು 5ನೇ ತರಗತಿ ವಿದ್ಯಾರ್ಥಿಗಳು ಸರಳಗಣಿತದ ಸಮಸ್ಯೆಗಳನ್ನು ಬಿಡಿಸಲು ಕಷ್ಟಪಡುವುದನ್ನು ಗಮನಿಸಲಾಗಿದೆ. 76% ರಷ್ಟು ಇದ್ದ ದಾಖಲಾತಿ ಪ್ರಮಾಣವು 2024ರಲ್ಲಿ 71%ಗೆ ಸಹಗಮನಿಸಲಾಗಿದೆ.
4. 2009-10ನೇ ಸಾಲಿನಿಂದ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಕೊರತೆ, ವಲಸೆ ಹೋಗುವ ಕುಟುಂಬಗಳ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮಧ್ಯಾಂತರದಲ್ಲಿ ತರಗತಿಗಳಿಗೆ ಪ್ರವೇಶ ಪಡೆಯುವ ಸಮಸ್ಯೆಯಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಗಿರುತ್ತದೆ ಇವುಗಳಲ್ಲಿ **ಬಹುವರ್ಗ ಬೋಧನೆಯ ಕಲಿಕಾ ವಿಧಾನವು ಒಂದಾಗಿರುತ್ತದೆ.** ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಕ್ರಮೇಣವಾಗಿ ಬಲಪಡಿಸಲಾಗುತ್ತಿದ್ದು, ಶಿಕ್ಷಕರನ್ನು ಹಾಗೂ ಭೌತಿಕ ಸಾಲಭ್ಯಗಳನ್ನು ಒದಗಿಸಲಾಗಿರುವುದರಿಂದ ಇಂದಿನ ಸನ್ನಿವೇಶಕ್ಕೆ ಬಹುವರ್ಗ ಕಲಿಕಾ ವಿಧಾನವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುತ್ತದೆ.
5. ಸರ್ಕಾರದ ಆದೇಶ ಸಂಖ್ಯೆ: ಇಪಿ 64 ಎಂ.ಪಿ.ಇ 2024, ಬೆಂಗಳೂರು, ದಿನಾಂಕ: 15.10.2025ರಲ್ಲಿ ತಿಳಿಸಿರುವಂತೆ ಈಗಾಗಲೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯು ಶೇ.46 ರಿಂದ ಶೇ.38 ಕ್ಕೆ ಕುಸಿದಿರುವುದು ಕಂಡುಬರುತ್ತದೆ. ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಏಕ ತರಗತಿ ಬೋಧನೆಗೆ ಒಳಪಡಿಸಲು ಇಚ್ಛಿಸುತ್ತಿರುವುದು ಸಹ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವು ಇಳಿಕೆಯಾಗಿರುವುದು ಕಾರಣವಾಗಿರುತ್ತದೆ.
6. ಈ ಮೇಲಿನ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಕಾಲಕಾಲಕ್ಕೆ ಸರ್ಕಾರವು ಅನೇಕ ಅಗತ್ಯ ಉಪಕ್ರಮಗಳನ್ನು

ಜಾರಿಗೊಳಿಸುತ್ತಾ ಬಂದಿದೆ. ಅದರಂತೆ ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 2018-19ನೇ ಸಾಲಿನಿಂದ 2025-26ನೇ ಸಾಲಿನವರೆಗೆ ವಿವಿಧ ಹಂತಗಳಲ್ಲಿ 9522 ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಬೋಧನಾ ಕ್ರಮವನ್ನು ಅನುಷ್ಠಾನಗೊಳಿಸಲು ಅನುಮತಿಸಲಾಗಿರುತ್ತದೆ. ಅಲ್ಲದೇ ಪ್ರಸಕ್ತ ಸಾಲಿನಲ್ಲಿ 474 ಕೆಪಿಎಸ್ 100 ಉರ್ದು ಕೆಪಿಎಸ್, ಕೆ.ಕೆ.ಆರ್.ಡಿ.ಬಿ ವತಿಯಿಂದ 200 ಕೆಪಿಎಸ್ ಶಾಲೆಗಳು, ಈ ಹಿಂದೆ ಅನುಮತಿ ಪಡೆದು ನಡೆಯುತ್ತಿರುವ 309 ಕೆಪಿಎಸ್ ಶಾಲೆಗಳು ಒಳಗೊಂಡಂತೆ ಒಟ್ಟು 1083 ಕೆಪಿಎಸ್ ಶಾಲೆಗಳು 100 (CEPMIZ) ಶಾಲೆಗಳು 536 ಪಿಎಂಶ್ರೀ ಶಾಲೆಗಳು ಮತ್ತು 6675 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಗೆ ಅನುಮತಿ ನೀಡಲಾಗಿರುತ್ತದೆ. ರಾಜ್ಯದ 1ರಿಂದ 10ನೇ ತರಗತಿವರೆಗೆ 500ಕ್ಕಿಂತ ಹೆಚ್ಚು ದಾಖಲಾತಿ ಇರುವ 31 ಶಾಲೆಗಳಲ್ಲಿ, 1ರಿಂದ 5ನೇ ತರಗತಿಯಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ 4070 ಆಗಿರುತ್ತದೆ. **ಈ ಎಲ್ಲಾ ಶಾಲೆಗಳಲ್ಲಿ ಏಕರೂಪದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಬೇಕಿರುತ್ತದೆ.**

7. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 2024 ರಲ್ಲಿ NCERT PARAKH (Performance Assessment, Review and Analysis of Knowledge for Holistic development) RASHTRIYA SARVEKSHAN 2 20240 ASER (Annual Status of Education Report) ವರದಿಯಲ್ಲಿ ವಿದ್ಯಾರ್ಥಿಗಳು ನಿರೀಕ್ಷಿತ ಸಾಮರ್ಥ್ಯಗಳನ್ನು ಗಳಿಸದಿರುವುದು ಕಂಡುಬಂದಿರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯು ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಅನೇಕ ಉಪಕ್ರಮಗಳನ್ನು ಜಾರಿಮಾಡುತ್ತಾ ಬಂದಿರುತ್ತದೆ.
8. ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಸುಧಾರಣೆ: 2009-10ನೇ ಸಾಲಿನಿಂದ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಕೊರತೆ, ವಲಸೆ ಹೋಗುವ ಕುಟುಂಬಗಳ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮದ್ಯಂತರದಲ್ಲಿ ತರಗತಿಗಳಿಗೆ ಪ್ರವೇಶ ಪಡೆಯುವ ಸಮಸ್ಯೆಯಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಗಿರುತ್ತದೆ. ಇವುಗಳಲ್ಲಿ ಬಹುವರ್ಗ ಬೋಧನೆಯ ಕಲಿಕಾ ವಿಧಾನವು ಒಂದಾಗಿರುತ್ತದೆ. ಸರ್ಕಾರಿ ಶಾಲೆಗಳಿಗೆ ಒದಗಿಸಲಾಗಿರುವ ಭೌತಿಕ ಸೌಲಭ್ಯಗಳು ಮತ್ತು ಶಿಕ್ಷಕರ ನೇಮಕಾತಿಯ ಒತ್ತಡವನ್ನು ಕಡಿಮೆ ಮಾಡುವಲ್ಲಿ

| | | |
|---|---|---|
| | | ನೆರವಾಗಿರುತ್ತದೆ. ಇಂದಿನ ಸನ್ನಿವೇಶಕ್ಕೆ ಬಹುವರ್ಗ ಕಲಿಕಾ ವಿಧಾನವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುತ್ತದೆ.<br>**ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಏಕರೂಪದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.** |
| **ಇ)** | ಶಾಲಾ ಶಿಕ್ಷಕರಿಗೆ ಬಿಎಲ್‌ಒ, ಸೇರಿದಂತೆ ಚುನಾವಣಾ ಮತ್ತು ಇತರ ಹೆಚ್ಚುವರಿ ಹೊಣೆಗಾರಿಕೆಗಳನ್ನು ವಹಿಸಲಾಗುತ್ತಿದೆಯೇ; ಇದರಿಂದ ಪಾಠ್ಯ ಚುಟುವಟಿಕೆಗಳಿಗೆ ವ್ಯತ್ಯಯ ಉಂಟಾಗುತ್ತಿರುವ ಬಗ್ಗೆ ಪರಿಶೀಲನೆ ನಡೆಸಿದೆಯೇ; ಪಠ್ಯಪುಸ್ತಕಗಳ ಬೇಡಿಕೆಗಾಗಿ ಆನ್‌ಲೈನ್ ಮೂಲಕ, ಸ್ಯಾಟ್ಸ್ ಮೂಲಕ ವಿದ್ಯಾರ್ಥಿ ಮಾಹಿತಿ ನಮೂದಿಸುವಲ್ಲಿ ಉಂಟಾಗುತ್ತಿರುವ ತಾಂತ್ರಿಕ ತೊಂದರೆಗಳನ್ನು ಪರಿಹರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಶಾಲಾ ಶಿಕ್ಷಕರಿಗೆ ವಹಿಸಲಾಗುತ್ತಿರುವ ಹೆಚ್ಚುವರಿ ಹೊಣೆಗಾರಿಕೆಗೆ ಸಂಬಂಧಿಸಿದಂತೆ -<br>ಸರ್ವೋಚ್ಚ ನ್ಯಾಯಾಲಯದ ಅಪೀಲ್ ಸಂಖ್ಯೆ: 5659/2007 ರಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಲು ಭಾರತ ಚುನಾವಣಾ ಆಯೋಗದ ಮತದಾರರ ಪಟ್ಟಿಗಳ ಕೈಪಿಡಿ ಅಕ್ಟೋಬರ್ 2016 ರ ಅಧ್ಯಾಯ 5 ರ ಪ್ಯಾರಾ 5.2 ಮತಗಟ್ಟೆ ಮಟ್ಟದ ಅಧಿಕಾರಿಗಳ ನಿಯೋಜನೆಗೆ 13 ವಿವಿಧ ಹುದ್ದೆಗಳ ನೀಡಲಾಗಿರುತ್ತದೆ. ಅದರಲ್ಲಿ ಶಿಕ್ಷಕರ ಹುದ್ದೆಯೂ ಒಂದಾಗಿರುತ್ತದೆ. ಹಾಗೂ ತೀರಾ ಅನಿವಾರ್ಯ ಸಂದರ್ಭಗಳಲ್ಲಿ ಕೆಲವೊಂದು ಷರತ್ತಿನ ಮೇರೆಗೆ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಲಾಗುತ್ತಿದೆ. ಹಾಗೂ ದಿನಾಂಕ: 01-07-2025 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆಯಲ್ಲಿ ವಿದ್ಯಾರ್ಥಿಗಳ ಪಠ್ಯ ಚಟುವಟಿಕೆಗಳಿಗೆ ವ್ಯತ್ಯಯವಾಗದಂತೆ ಸೂಚನೆಗಳನ್ನು ನೀಡಲಾಗಿದೆ.(ಪ್ರತಿ ಲಗತ್ತಿಸಿದೆ)<br>**ಪಠ್ಯಪುಸ್ತಕಗಳ ಬೇಡಿಕೆಗೆ ಸಂಬಂಧಿಸಿದಂತೆ** :-<br>ಪಠ್ಯಪುಸ್ತಕ ಬೇಡಿಕೆ, ಪೂರೈಕೆಗೆ ಸಂಬಂಧಿಸಿದಂತೆ SATS ಮೂಲಕವೇ ಕ್ರಮ ವಹಿಸಲಾಗುತ್ತಿದೆ.<br>ಬೇಡಿಕೆಯನ್ನು ಸಲ್ಲಿಸುವ ಪ್ರಕ್ರಿಯೆ ಆರಂಭವಾದಾಗ ರಾಜ್ಯದ ಎಲ್ಲಾ ಶಾಲೆಗಳು ಏಕ ಕಾಲಕ್ಕೆ ಬೇಡಿಕೆ ಸಲ್ಲಿಸಲು ಲಾಗಿನ್ ಆದಾಗ SATSನ ಸರ್ವರ್ ನಿಧಾನವಾಗುತ್ತಿದೆ ಎಂಬ ಕಾರಣದಿಂದ ಈ ಬಾರಿ ಎಲ್ಲರೂ ಏಕ ಕಾಲಕ್ಕೆ ಲಾಗಿನ್ ಆಗುವುದನ್ನು ನಿಯಂತ್ರಿಸಲು ವಿಭಾಗವಾರು ವೇಳಾ ಪಟ್ಟಿ ಸಿದ್ಧ ಪಡಿಸಿ ನಿಗದಿತ ವೇಳೆಯೊಳಗೆ ಆಯಾ ವಿಭಾಗದವರು ಲಾಗಿನ್ ಆಗಿ ಪಠ್ಯಪುಸ್ತಕ ಬೇಡಿಕೆ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿತ್ತು. ನಂತರ ಆಗಿಂದಾಗೆ ಬಂದ ತಾಂತ್ರಿಕ ತೊಂದರೆಗಳನ್ನು ತಾಂತ್ರಿಕ ಸಹಾಯಕರು ಮತ್ತು ಪ್ರೋಗ್ರಾಮರ್ ಗಳು ಪರಿಹರಿಸಿರುತ್ತಾರೆ. |
| **ಈ)** | ದೈಹಿಕ ಶಿಕ್ಷಣಕ್ಕೆ ಆದ್ಯತೆ ನೀಡದಿರುವುದು, ಶಾಲೆಗಳ ಮಾನ್ಯತೆ, ಪ್ರವೇಶಕ್ಕೆ ಪೂರ್ಣ 6 ವರ್ಷದ ವಯೋಮಿತಿ ಅನುಷ್ಠಾನ, ಹೊಸ ತಾಲೂಕುಗಳಲ್ಲಿ ಬಿಇಒ ಹುದ್ದೆಗಳ ಕೊರತೆ, ಸಮರ್ಪಕ ಭೂದಾಖಲೆಗಳಿಗೆ ಕ್ರಮವಹಿಸದ | **ದೈಹಿಕ ಶಿಕ್ಷಣಕ್ಕೆ ಆದ್ಯತೆ.**<br>ದೈಹಿಕ ಶಿಕ್ಷಣ ವಿಷಯವು ಪಠ್ಯ ವಿಷಯದ ಭಾಗವಾಗಿದ್ದು, ಇದರಿಂದ ವಿದ್ಯಾರ್ಥಿಗಳ ದೈಹಿಕ ಚಟುವಟಿಕೆ ಮತ್ತು ಆರೋಗ್ಯಕ್ಕೆ ಪೂರಕವಾದ ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. ಅಂತೆಯೇ ದೈಹಿಕ ಶಿಕ್ಷಣ, ಕ್ರೀಡೆಯ ಅವಧಿಗಳು ಎಂದಿನಂತೆಯೇ |

| | | |
|---|---|---|
| | ಶಾಲೆಗಳಿಗೆ ದಾನವಾಗಿ ನೀಡಿದ ಭೂಮಿಯನ್ನು ವಾಪಸು ಪಡೆಯುವ ಘಟನೆಗಳು ಹಾಗೂ ಮಕ್ಕಳ ಸುರಕ್ಷತೆ ಕುರಿತು ಅನಿಯಮಿತ ಸಭೆಗಳು, ಇತ್ಯಾದಿಗಳು ಒಟ್ಟು ಶಿಕ್ಷಣ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಭೀರುವುದು ಕಡಿಮೆ ಮಾಡಲು ಸರ್ಕಾರದ ಕಾಲಮಿತಿಯ ಕ್ರಮಗಳೇನು; | ಮುಂದುವರೆಯುತ್ತಿರುತ್ತವೆ.<br>ಈ ಹಿಂದಿನಂತೆಯೇ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ದೈಹಿಕ ಶಿಕ್ಷಣದೊಂದಿಗೆ ಮೌಲ್ಯ ಶಿಕ್ಷಣವನ್ನು ಒಳಗೊಂಡಂತೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ ವಹಿಸಲಾಗಿರುತ್ತದೆ. ದೈಹಿಕ ಶಿಕ್ಷಣಕ್ಕೆ ಮೀಸಲಾಗಿ ಇರುವ ವಾರದಲ್ಲಿನ ನಾಲ್ಕು ಅವಧಿಗಳು ನಿರಂತರವಾಗಿ ಮುಂದುವರೆಯುತ್ತಿರುತ್ತವೆ. |
| ಉ) | ಈ ಎಲ್ಲ ಸಮಸ್ಯೆಗಳನ್ನು ಸಮಗ್ರವಾಗಿ ಪರಿಶೀಲಿಸಿ ಒಂದೊಂದಾಗಿ ಪರಿಹಾರ ಕ್ರಮ ರೂಪಿಸಲು ಸರ್ಕಾರದ ಕಾಲಮಿತಿಯ ಕಾರ್ಯಯೋಜನೆ ಏನು? | ಸರ್ಕಾರದ ಆದೇಶ ಸಂಖ್ಯೆ: ಇಪಿ 116 ಎಂಪಿಇ 2025, ದಿನಾಂಕ: 02.02.2026 ರ ಸರ್ಕಾರದ ಆದೇಶದಲ್ಲಿ, ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಪಠ್ಯವಸ್ತುವನ್ನು ಒಳಗೊಂಡಂತೆ ಮೌಲ್ಯ ಶಿಕ್ಷಣ ಪಠ್ಯ ಪುಸ್ತಕವನ್ನು ಮುದ್ರಿಸಿ ವಿತರಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅವಧಿಗಳು ಎಂದಿನಂತೆಯೇ ಮುಂದುವರೆಯುತ್ತವೆ. ದೈಹಿಕ ಶಿಕ್ಷಣದ ವಿಷಯಗಳೂ ಮುಂದುವರೆದಿರುತ್ತವೆ. 'ಸದೃಢವಾದ ದೇಹದಲ್ಲಿ ಆರೋಗ್ಯಯುತ ಮನಸ್ಸು' ಎನ್ನುವಂತೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಮಾಡುವುದೇ ಶಿಕ್ಷಣದ ಗುರಿ. ಶಾರೀರಿಕ, ಬೌದ್ಧಿಕ, ಸಾಮಾಜಿಕ, ನೈತಿಕ ವಿಕಾಸವನ್ನು ಉಂಟುಮಾಡುವಲ್ಲಿ ಶಿಕ್ಷಣವು ತನ್ನ ಪಾತ್ರವನ್ನು ವಹಿಸುತ್ತದೆ. ಅಂತೆಯೇ ರಾಜ್ಯವು ದೈಹಿಕ ಶಿಕ್ಷಣದಲ್ಲಿ ಆರೋಗ್ಯ, ಯೋಗ, ಕ್ರೀಡೆ, ಮೌಲ್ಯ ಮತ್ತು ನೈರ್ಮಲ್ಯದ ವಿಷಯಗಳನ್ನು ಸೇರ್ಪಡೆಗೊಳಿಸಿ ಸಮಗ್ರವಾಗಿ ದೈಹಿಕ ಶಿಕ್ಷಣವನ್ನು ಬೋಧಿಸುವ, ಕ್ರೀಡೆ ಸಂಘಟಿಸುವ ಕಾರ್ಯವನ್ನು ಮಾಡಿಸುತ್ತಾ ಬಂದಿರುತ್ತದೆ.<br>ಇದರಲ್ಲಿ ಮಕ್ಕಳ ಸುರಕ್ಷತೆಯ ಅಡಿ **POCSO** ಸಂಬಂಧ ಮಾನ್ಯ ನ್ಯಾಯಾಲಯವು ದಿನಾಂಕ 04.11.2022 ರಂದು ನೀಡಿರುವ ತೀರ್ಪಿನ ಅನ್ವಯ, 9 ನೇ ತರಗತಿ ಮೇಲ್ಪಟ್ಟ ಶಾಲಾ-ಕಾಲೇಜುಗಳ 'ವಿದ್ಯಾರ್ಥಿಗಳಲ್ಲಿ POCSO ಕಾಯ್ದೆಯ ಕಾನೂನಿನ ಅರಿವು ಮೂಡಿಸಲು ತರಬೇತಿ ನೀಡಲು ಸೂಚಿಸಿದೆ.<br>ಈ ನಿಟ್ಟಿನಲ್ಲಿ ಸಂಪನ್ಮೂಲ ತಂಡವನ್ನು ರಚಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಜಾಗೃತಿ ಕೈಪಿಡಿಯನ್ನು ಹಾಗೂ ಪ್ರತ್ಯೇಕವಾಗಿ ಪೋಷಕರು, ಮಕ್ಕಳು, ಶಾಲಾ ಆಡಳಿತ ಮಂಡಳಿ ಮತ್ತು ಸಮುದಾಯದವರಿಗೆ ಜಾಗೃತಿ ಮೂಡಿಸುವ ಮಾಹಿತಿ ಪತ್ರವನ್ನು (Brochure) ಸಿದ್ಧಪಡಿಸಿ DSERT ಮತ್ತು ಶಾಲಾ ಶಿಕ್ಷಣ ಆಯುಕ್ತರ ಕಛೇರಿಯ Website ನಲ್ಲಿ ಅಳವಡಿಸಲಾಗಿದೆ. ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳ ಶಿಕ್ಷಣ ಇಲಾಖೆಯ ಉಸ್ತುವಾರಿ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. 2024-25 ನೇ ಸಾಲಿನಲ್ಲಿ 6 ರಿಂದ 10ನೇ ತರಗತಿ ಬೋಧಿಸುತ್ತಿರುವ 27590 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಈ |

ಮೂಲಕ ವಿದ್ಯಾರ್ಥಿಗಳಲ್ಲಿ POCSO ಕಾಯ್ದೆಯ ಕಾನೂನಿನ ಅರಿವು ಮೂಡಿಸಲು ಹಾಗೂ ಸಮುದಾಯದಲ್ಲಿ ಕಾಯ್ದೆಯ ಅರಿವು ಮೂಡಿಸಲು ಕ್ರಮವಹಿಸಲಾಗುತ್ತಿದೆ. 2025-26ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಯ 51781 ಮತ್ತು ಪ್ರೌಢಶಾಲೆಯ 44218 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. 2025-26ನೇ ಸಾಲಿನಲ್ಲಿ ಜಿಲ್ಲಾ, ಉಪ ನಿರ್ದೇಶಕರು (ಅಭಿವೃದ್ಧಿ ಹಾಗೂ ಆಡಳಿತ) ರವರಿಗೆ ಎರಡು ದಿನಗಳ ಕಾರ್ಯಗಾರವನ್ನು ಆಯೋಜಿಸಿ ತರಬೇತಿ ನೀಡಲಾಗಿದೆ.

**ಶಾಲೆಗಳ ಮಾನ್ಯತೆ.**

1. ಈ ಕುರಿತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 36ರನ್ವಯ
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) ನಿಯಮಗಳು 1999
3. ಕರ್ನಾಟಕ ಶಿಕ್ಷಣ ಕಾಯ್ದೆ [ಖಾಸಗಿ ಶಾಲೆಗಳ ನೊಂದಣಿ ಮತ್ತು ನಿಯಂತ್ರಣ] ನಿಯಮ-1999 ಸರ್ಕಾರದ ಅಧಿಸೂಚನೆ ಸಂ:ಖ್ಯೆ ಇಡಿ:137:ವಿವಿಧ:98, ದಿನಾಂಕ: 19.05.1999
4. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009.
5. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು-2012.
6. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ: 709 ಪಿಜಿಸಿ 2017, ದಿನಾಂಕ:08.03.2018, [ಅಧಿಸೂಚನೆ-1] ಮತ್ತು ದಿ:07.03.2018, [ಅಧಿಸೂಚನೆ - 2 ಮತ್ತು 3].

- ಈ ಮೇಲ್ಕಂಡ ಶಿಕ್ಷಣ ಕಾಯ್ದೆ/ ಅಧಿಸೂಚನೆ/ ಸುತ್ತೋಲೆಗಳನ್ವಯ ಪ್ರಥಮ ಮಾನ್ಯತೆ/ ಮಾನ್ಯತೆ ನವೀಕರಣಕ್ಕೆ ಪ್ರತಿ ಶೈಕ್ಷಣಿಕ ವರ್ಷವು ಸುತ್ತೋಲೆಯನ್ನು ಹೊರಡಿಸಿ, ಆಡಳಿತ ಮಂಡಳಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಪಡೆದು ಎಲ್ಲಾ ಮಾನದಂಡಗಳನ್ನು ಪೂರೈಸಿರುವ ಆಡಳಿತ ಮಂಡಳಿಗಳಿಗೆ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣವನ್ನು ನೀಡಲಾಗುತ್ತಿದೆ.
- **2017-18ನೇ ಸಾಲಿನ ಹಿಂದಿನ ಮಾನ್ಯತೆ ನವೀಕರಣ ಪಡೆಯದೇ ಇರುವ ಆಡಳಿತ ಮಂಡಳಿಯ ಶಾಲೆಗಳಿಗೆ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣಕ್ಕೆ ಅವಕಾಶ ಕಲ್ಪಿಸಿಕೊಡುವ ಸಂಬಂಧ ಹಾಗೂ ಸದರಿ ಸಾಲಿನ ಮಾನ್ಯತೆ ನವೀಕರಣ ಸಂಬಂಧ ಸಲ್ಲಿಸಬೇಕಾದ**

| | | |
|---|---|---|
| | | **ಕೆಲವೊಂದು ದಾಖಲೆಗಳ ಸರಳೀಕರಣ ಕುರಿತು ಕ್ರಮವಹಿಸುವ ಸಂಬಂಧ ತಿದ್ದುಪಡಿ ಕುರಿತ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.**<br><br>ಸದರಿ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಕುರಿತು ಸಲ್ಲಿಸಲಾಗುವ ದಾಖಲೆಗಳ ನೈಜತೆ ಪರಿಶೀಲನೆ ಕುರಿತು ಸಂಬಂಧಪಟ್ಟ ಇತರೆ ಇಲಾಖೆಗಳಿಗೆ ಪತ್ರ ವ್ಯವಹಾರ ನಡೆಸಿ, API ಸಂಪರ್ಕ ಪಡೆಯಲು ಕ್ರಮವಹಿಸಲಾಗುತ್ತಿದೆ.<br><br>**ಪ್ರವೇಶಕ್ಕೆ ಪೂರ್ಣ 6 ವರ್ಷದ ವಯೋಮಿತಿ ಅನುಷ್ಠಾನ**<br><br>ಆರ್.ಟಿ.ಇ ಕಾಯಿದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರಂತೆ ಶೈಕ್ಷಣಿಕ ವರ್ಷದ ಜೂನ್ ಒಂದನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ : ಇಪಿ 260 ಪಿಜಿಸಿ 2021 ದಿನಾಂಕ : 26-07-2022 ಹಾಗೂ ತಿದ್ದುಪಡಿ ಸಂಖ್ಯೆ : ಇಪಿ 387 ಪಿಜಿಸಿ 2022 ದಿನಾಂಕ : 15-11-2022 ರಂತೆ ಆದೇಶಿಸಿ ನಿಗಧಿ ಪಡಿಸಿದ್ದು, ಪ್ರಸ್ತುತ ಸರ್ಕಾರಿ ಆದೇಶವನ್ನು ಪಾಲಿಸಲಾಗುತ್ತಿದೆ.<br><br>6 ವರ್ಷಕ್ಕೆ 1ನೇ ತರಗತಿ ಪ್ರಾರಂಭವಾಗುವುದರಿಂದ 3-6 ವರ್ಷದ ಮಕ್ಕಳು ನೂತನ 5+3+3+4 ಸಂರಚನೆಯಲ್ಲಿ, 3ನೇ ವಯಸ್ಸಿನಿಂದ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಸುಭದ್ರ ತಳಹದಿಯಾದ (ECCE) ಶಿಕ್ಷಣ ಸೇರಿದ್ದು, ಇದು ಮಕ್ಕಳಲ್ಲಿ ಒಟ್ಟಾರೆ ಉತ್ತಮ ಕಲಿಕೆ, ಅಭಿವೃದ್ಧಿ ಮತ್ತು ಸ್ವಾಸ್ಥ್ಯವನ್ನು ಉತ್ತೇಜಿಸುವ ಗುರಿ ಹೊಂದಿದ್ದು ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಯ ದೃಷ್ಟಿ ಹಾಗೂ 1ನೇ ತರಗತಿಗೆ ಪ್ರವೇಶಕ್ಕಾಗಿ ರಾಜ್ಯಾದ್ಯಂತ ಏಕ ರೂಪ ವಯಸ್ಸಿನ ಮಾನದಂಡಗಳ ಅನುಷ್ಠಾನವನ್ನು ಪರಿಗಣಿಸಿ ನಿಯಮವನ್ನು ಜಾರಿಗೊಳಿಸಿದೆ. (ಸುತ್ತೋಲೆ ಪ್ರತಿ ಲಗತ್ತಿಸಿದೆ).<br>**ಹೊಸ ತಾಲೂಕುಗಳಲ್ಲಿ ಬಿಇಓ ಹುದ್ದೆಗಳ ಕೊರತೆ.**<br>ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳ ಕುರಿತ ವಿಚಾರಕ್ಕೆ ಸಂಬಂಧಿಸಿದಂತೆ,<br><br>ರಾಜ್ಯದ ಒಟ್ಟು 15 ನೂತನ ತಾಲ್ಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವ ಕುರಿತು ವಿವರವಾದ ಪ್ರಸ್ತಾವನೆಯನ್ನು ಪತ್ರ ಸಂಖ್ಯೆ:ಯೋ6(3)(4)/12.ಹೊ.ಕ.ತಾ.ಕ್ಷೇ.ಶಿ.ಕ.ನಿ/2019-20, |

| | | |
|---|---|---|
| | | ದಿನಾಂಕ:07.09.2023ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.(ಪ್ರತಿ ಲಗತ್ತಿಸಿದೆ)<br><br>ಈ ಕುರಿತು ಸರ್ಕಾರದ ಪತ್ರ ಸಂಖ್ಯೆ ಇಪಿ 82 ಡಿ.ಪಿ.ಐ 2025, ದಿನಾಂಕ-28.10.2025ರನ್ವಯ ಹೊಸದಾಗಿ ರಚನೆಯಾದ ಕಂದಾಯ ತಾಲ್ಲೂಕುಗಳಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಎರಡು ವರ್ಷಗಳ ಕಾಲ ಮುಂದೂಡುವಂತೆ ಆರ್ಥಿಕ ಇಲಾಖೆಯು ತಿಳಿಸಿದೆ. ಮುಂದುವರೆದು ಹೆಚ್ಚಿನ ಇಲಾಖೆಗಳ ಸೇವೆಗಳು ಈಗ ಗಣಕೀಕೃತಗೊಳ್ಳುತ್ತಿರುವುದರಿಂದ ಎಲ್ಲಾ ತಾಲ್ಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ತೆರೆಯುವ ಅಗತ್ಯತೆ ಕುರಿತು ಮರುಪರಿಶೀಲಿಸುವಂತೆ ಸರ್ಕಾರದಿಂದ ನಿರ್ದೇಶನವಿರುತ್ತದೆ ಅದರಂತೆ ಕ್ರಮವಹಿಸಲಾಗುವುದು.<br><br>**ಸಮರ್ಪಕ ಭೂದಾಖಲೆಗಳಿಗೆ ಕ್ರಮವಹಿಸದೆ ಶಾಲೆಗಳಿಗೆ ದಾನವಾಗಿ ನೀಡಿದ ಭೂಮಿಯನ್ನು ವಾಪಸು ಪಡೆಯುವ ಘಟನೆಗಳು**<br><br>ಸರ್ಕಾರದ ಆದೇಶ ಸಂಖ್ಯೆ : ಇಡಿ: 98 :ಯೋಸಕ 2010 ಬೆಂಗಳೂರು, ದಿನಾಂಕ: 01-02-2011ರನ್ವಯ ಸ್ವೀಕರಿಸುವ ದಾನ, ವಿದ್ಯಾ ಸಂಸ್ಥೆಗೆ ದಾನಿಗಳು ಸೂಚಿಸುವ ಹೆಸರನ್ನು ನಾಮಕರಣ ಮಾಡಲು . ಮಾತ್ರ ಅನ್ವಯವಾಗುತ್ತದೆ. ಸ್ವೀಕರಿಸಿದ ದಾನವನ್ನು ಯಾವುದೇ ಕಾರಣಗಳಿಂದಾಗಿ ಹಿಂತಿರುಗಿಸ ಲಾಗುವುದಿಲ್ಲ.(ಪ್ರತಿ ಲಗತ್ತಿಸಿದೆ).<br><br>ಸರ್ಕಾರಿ ಶಾಲೆಗೆ ದಾನವಾಗಿ ನೀಡಿದ ಜಾಗ ಆಯಾ ಶಾಲಾ ಹೆಸರಿನಲ್ಲಿ ಖಾತೆಯಾಗದಿದ್ದಲ್ಲಿ, ಸದರಿ ಶಾಲೆ ಹೆಸರಿನಲ್ಲಿ ಖಾತೆ ಮಾಡಿಸಲು ಹಾಗೂ ಒಂದು ವೇಳೆ ಈ ಜಾಗ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮಗಳನ್ನು ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಡಳಿತಗಳಿಗೆ ಮತ್ತು ಶಾಲಾ ಶಿಕ್ಷಣ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನಗಳನ್ನು ನೀಡಲಾಗಿದೆ. |

ಸಂಖ್ಯೆ: ಇಪಿ 74 ಪಿಎಂಎ 2026

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಎಡಿಎಂ2(2)/ಪ್ರಾ.ಶಾ.ದಾ/2022-23 /E-850743/1720582 ದಿನಾಂಕ : 25-04-2025

## ಸುತ್ತೋಲೆ

**ವಿಷಯ :** ಮಕ್ಕಳನ್ನು ಪ್ರಾಥಮಿಕ ಶಾಲಾ ಒಂದನೇ ತರಗತಿಗೆ ದಾಖಲಾತಿ ಮಾಡಲು ವಯೋಮಿತಿಯನ್ನು ನಿರ್ಧರಿಸುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಆದೇಶ ಸಂಖ್ಯೆ : ಇಪಿ 260 ಪಿಜಿಸಿ 2022 ದಿನಾಂಕ :16-04-2025.

****

ವಿಷಯಾನ್ವಯವಾಗಿ, ರಾಜ್ಯ ನೀತಿ ಆಯೋಗದ ಶಿಫಾರಸು / ಅಭಿಪ್ರಾಯವನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ : ಇಪಿ 260 ಪಿಜಿಸಿ 2021 ದಿನಾಂಕ : 26.07.2022ರಲ್ಲಿ, ಶೈಕ್ಷಣಿಕ ವರ್ಷದ ಜೂನ್ ಒಂದನೇ ತಾರೀಖಿಗೆ 6 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗದಿಪಡಿಸಿರುವುದಕ್ಕೆ ಒಂದು ಬಾರಿಯ ಕ್ರಮವಾಗಿ ಸಡಿಲಿಕೆಯನ್ನು ನೀಡಿ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಕಾರಣಗಳಿಂದ ಪೂರ್ವ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿರುವ ಹಾಗೂ ಜೂನ್ 1 ನೇ ತಾರೀಖಿಗೆ 5 ವರ್ಷ 5 ತಿಂಗಳು ಪೂರ್ಣಗೊಂಡಿರುವ ಮಕ್ಕಳನ್ನು 2025-26ನೇ ಶೈಕ್ಷಣಿಕ ವರ್ಷಕ್ಕೆ ಮಾತ್ರ ಸೀಮಿತಗೊಳಿಸಿ ಒಂದನೇ ತರಗತಿಗೆ ದಾಖಲು ಮಾಡಿಕೊಳ್ಳಲು ಆದೇಶಿಸಿದೆ.

ಮುಂದುವರೆದು, 2026-27ನೇ ಶೈಕ್ಷಣಿಕ ವರ್ಷದಿಂದ ಜೂನ್ ಒಂದನೇ ತಾರೀಖಿಗೆ 06 ವರ್ಷಗಳು ಪೂರ್ಣಗೊಂಡಿರುವ ಮಕ್ಕಳನ್ನು ಮಾತ್ರ ಒಂದನೇ ತರಗತಿಗೆ ದಾಖಲಿಸಿಕೊಳ್ಳತಕ್ಕದ್ದು ಮತ್ತು ಸರ್ಕಾರದ ಆದೇಶ ಸಂಖ್ಯೆ : ಇಪಿ 100 ಪಿಜಿಸಿ 2024,ದಿನಾಂಕ : 26.06.2024ರಲ್ಲಿ ಈಗಾಗಲೇ ಎಲ್.ಕೆ.ಜಿ ಪ್ರವೇಶಾತಿಗೆ 4 ವರ್ಷ ಮತ್ತು ಯು.ಕೆ.ಜಿ ಪ್ರವೇಶಾತಿಗೆ 5 ವರ್ಷಗಳ ಕನಿಷ್ಠ ವಯೋಮಿತಿ ನಿಗಧಿಪಡಿಸಲಾಗಿರುತ್ತದೆ. ಅದರಂತೆ 2025-26ನೇ ಶೈಕ್ಷಣಿಕ ವರ್ಷದಿಂದ ಎಲ್.ಕೆ.ಜಿ. ಅಥವಾ ತತ್ಸಮಾನ ದಾಖಲಾತಿಗೆ 4 ವರ್ಷ ಪೂರ್ಣಗೊಂಡಿರುವ ಮತ್ತು ಯು.ಕೆ.ಜಿ ಅಥವಾ ತತ್ಸಮಾನ ದಾಖಲಾತಿಗೆ 5 ವರ್ಷ ಪೂರ್ಣಗೊಂಡಿರುವ ಮಕ್ಕಳನ್ನು ಮಾತ್ರ ದಾಖಲಿಸಿಕೊಳ್ಳತಕ್ಕದ್ದು.

ಮೇಲ್ಕಂಡ ಆದೇಶಗಳನ್ನು ತಮ್ಮ ಆಡಳಿತ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಶಾಲಾ ಮುಖ್ಯಸ್ಥರಿಗೆ ತಿಳಿಸಲಾಗಿದೆ. ಉಲ್ಲೇಖಿತ ಸರ್ಕಾರದ ಆದೇಶ ಪ್ರತಿಯನ್ನು ಇದರೊಂದಿಗೆ ಅನುಬಂಧಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ ಸೂಕ್ತ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ) ಆಯುಕ್ತರ ಕಛೇರಿ ,ಇವರಿಗೆ ಕಳುಹಿಸುತ್ತಾ ಆರ್.ಟಿ.ಇ ದಾಖಲಾತಿ ತಂತ್ರಾಂಶದಲ್ಲಿ ಸೂಕ್ತ ಮಾರ್ಪಾಡು ಮಾಡಲು ಕ್ರಮವಹಿಸಲು ಸೂಚಿಸಿದೆ.
4. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳ ಮುಖ್ಯಸ್ಥರಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಮುಖಾಂತರ ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು,**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು-01(**ಗೌರವಗಳೊಂದಿಗೆ**)
2. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ/ಕಲಬುರಗಿ
3. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ
4. ಸಹ ನಿರ್ದೇಶಕರು (ಶಾಲಾ ಶಿಕ್ಷಣ) ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು.
5. ಕಛೇರಿ ಪ್ರತಿ.